**ಸರ್ವ ಶಿಕ್ಷಣ ಅಭಿಯಾನ ಸಮಿತಿ – ಕರ್ನಾಟಕ**

**ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ, ಬೆಂಗಳೂರು – 01**

## ಸರ್ವ ಶಿಕ್ಷಣ ಅಭಿಯಾನ ಆಡಳಿತ ಮಂಡಳಿಯ 4ನೇ ಸಭೆಯ ನಡಾವಳಿಗಳು

ದಿನಾಂಕ: 02.01.2009ರಂದು ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಯವರು ಹಾಗೂ ಸರ್ವ ಶಿಕ್ಷಣ ಅಭಿಯಾನದ ಆಡಳಿತ ಮಂಡಳಿ ಅಧ್ಯಕ್ಷರೂ ಆಗಿರುವ ಡಾ: ಬಿ.ಎಸ್.ಯಡಿಯೂರಪ್ಪ, ಇರವ ಘನ ಅಧ್ಯಕ್ಷತೆಯಲ್ಲಿ, ವಿಧಾನಸೌಧದ ಸಭಾಂಗಣದಲ್ಲಿ ಸರ್ವ ಶಿಕ್ಷಣ ಅಭಿಯಾನ ಆಡಳಿತ ಮಂಡಳಿಯ 4ನೇ ಸಭೆಯು ಜರುಗಿತು.

ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ (ಹೆಚ್ಚುವರಿ) ರವರಾದ ಶ್ರೀ.ಸುರಂಜನ ರವರು ಸನ್ಮಾನ್ಯ ಅಧ್ಯಕ್ಷರಿಗೆ ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು.

ಸಭೆಯಲ್ಲಿ ಹಾಜರಿದ್ದವರ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಮಾನ್ಯ ಶಿಕ್ಷಣ ಸಚಿವರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಇವರು ಮತ್ತೊಮ್ಮೆ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತ ಕೋರಿ, ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಬಗ್ಗೆ ಪ್ರಸ್ತಾವಿಕ ಭಾಷಣ ಮಾಡಿದರು. ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮಗಳ ಅನುಷ್ಠಾನ ಕಾರ್ಯದ ಬಗ್ಗೆ ಒದಗಿಸಲಾಗಿರುವ ಶಾಲಾ ಕಟ್ಟಡಗಳು ಹಾಗೂ ಹೆಚ್ಚುವರಿ ಕೊಠಡಿಗಳ ಬಗ್ಗೆ ಮತ್ತು ಇಲಾಖೆ ಕೈಗೊಂಡಿರುವ Child Track ಸಂಬಂಧ ವಿವರಿಸಿ, ಎಲ್ಲಾ ಮಕ್ಕಳ ಜಾಡು ಹಿಡಿಯುವಿಕೆಯನ್ನು ಕೈಗೊಳ್ಳಲು ಉದ್ದೇಶಿಸಿದೆ ಎಂಬ ಮಾಹಿತಿಯನ್ನು ನೀಡಿದರು. SIEMAT ಸ್ಥಾಪನೆ ಬಗ್ಗೆ ವಿವರಿಸುತ್ತಾ ಮಾನ್ಯ ಮುಖ್ಯಮಂತ್ರಿಗಳನ್ನು ಸರ್ಕಾರದಿಂದ ಜಾಗ್ರತೆ ಅನುಮೋದನೆಯನ್ನು ನೀಡಲು ಕೋರಿದರು. ಈ ಸಂಬಂಧ ಮಾನ್ಯ ಮುಖ್ಯಮಂತ್ರಿಯವರು ಚರ್ಚಿಸುತ್ತಾ, ಪ್ರಸ್ತಾವನೆಯನ್ನು ಕ್ಯಾಬಿನೆಟ್ ಅನುಮೋದನೆಗಾಗಿ ಕಳುಹಿಸಿಕೊಡಲು ಸೂಚಿಸಿದರು.

ಮಾನ್ಯ ಮುಖ್ಯಮಂತ್ರಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಶಿಕ್ಷಣ ಇಲಾಖೆಯಲ್ಲಿ ಪ್ರಚಲಿತ ಅನುಷ್ಠಾನಗೊಳಿಸುತ್ತಿರುವ ಹಲವಾರು ಕಾರ್ಯಕ್ರಮಗಳ ಬಗ್ಗೆ ಮತ್ತು ಭಾಗ್ಯಲಕ್ಷ್ಮಿ ಯೋಜನೆಯ ಬಗ್ಗೆ ಪ್ರಸ್ತಾಪಿಸಿದರು. ಕರ್ನಾಟಕದ ಸರ್ಕಾರಿ ಶಾಲೆಗಳ ಕಲಿಕಾ ಗುಣಮಟ್ಟ ಖಾಸಗಿ ಶಾಲೆಗಳ ಗುಣಮಟ್ಟದಷ್ಟು ಅಭಿವೃದ್ಧಿ ಹೊಂದುವಂತೆ ಇಲಾಖೆ ಅಧಿಕಾರಿಗಳು ಎಲ್ಲಾ ಹಂತಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲು ಸೂಚಿಸಿದರು. ಈ ನಿಟ್ಟಿನಲ್ಲಿ ನಲಿ–ಕಲಿಯಂತಹ ಕಾರ್ಯಕ್ರಮಗಳು ಉಪಯುಕ್ತವಾಗಿದ್ದು, ಈ ಕಾರ್ಯಕ್ರಮವನ್ನು 3 ಮತ್ತು 4 ನೇ ತರಗತಿಗಳಿಗೆ ವಿಸ್ತರಣೆಯಾಗುವುದು ಯುಕ್ತವಾಗಿದೆ ಎಂಬ ಅಭಿಪ್ರಾಯವನ್ನು ನೀಡಿದರು. ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಉದ್ದೇಶ ಸಫಲವಾಗುವ ರೀತಿಯಲ್ಲಿ ಅಧಿಕಾರಿಗಳು ಎಲ್ಲಾ ಹಂತಗಳಲ್ಲಿ

ಸಮನ್ವಯದಿಂದ ಕರ್ತವ್ಯ ನಿರ್ವಹಿಸಲು ಹಾಗೂ ರಾಜ್ಯದಲ್ಲಿ ಯಾವುದೇ ಮಗುವು ಶಿಕ್ಷಣದಿಂದ ವಂಚಿತವಾಗಿ ಶಾಲೆಯಿಂದ ಹೊರಗುಳಿಯದಂತೆ ಕ್ರಮ ವಹಿಸಲು ಹಾಗೂ ಗುಣಮಟ್ಟ ಶಿಕ್ಷಣ ನೀಡಬೇಕೆಂದು ಸೂಚಿಸಿದರು.

ಸಭೆಯು ಕೆಳಕಂಡಂತೆ ವಿಷಯಗಳನ್ನು ಅಜೆಂಡಾವಾರು ಚರ್ಚಿಸಿ ತೀರ್ಮಾನವನ್ನು ತೆಗೆದುಕೊಂಡಿತು.

ಸಭೆಯ ಆಧ್ಯಕ್ಷರ ಅಪ್ಪಣೆಯ ಮೇರೆಗೆ ಮೊದಲು "ಅಜೆಂಡಾ 6 – ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಪ್ರಮುಖ ಸಮಸ್ಯೆಗಳು" ವಿಷಯದ ಬಗ್ಗೆ ಚರ್ಚಿಸಲು ಹಾಗೂ ನಂತರ ಇತರೆ ವಿಷಯಗಳನ್ನು ಚರ್ಚಿಸಲು ಸಭೆಯು ಸರ್ವಾನುಮತದಿಂದ ನಿರ್ಧರಿಸಿತು.

| | |
|---|---|
| **ಅಜೆಂಡಾ –06** | **ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಪ್ರಮುಖ ಸಮಸ್ಯೆಗಳ ಕುರಿತು** |

**ಕ್ರಮ ಸಂಖ್ಯೆ 1 – ಏಕೋಪಾಧ್ಯಾಯ ಶಾಲೆಗಳ ಕುರಿತು** :

ರಾಜ್ಯ ಯೋಜನಾ ನಿರ್ದೇಶಕರು ಸ.ಶಿ.ಅ ರವರು ವಿಷಯ ಮಂಡನೆ ಮಾಡುತ್ತಾ, ರಾಜ್ಯದಲ್ಲಿ ಏಕೋಪಾಧ್ಯಾಯ ಶಾಲೆಗಳ ಸಂಖ್ಯೆಯನ್ನು ಕನಿಷ್ಟ ಮಟ್ಟಕ್ಕೆ ತರುವುದಾಗಿ ಕೇಂದ್ರಸರ್ಕಾರಕ್ಕೆ ಬದ್ಧತೆ ನೀಡಿರುವುದಾಗಿ ತಿಳಿಸಿದರು. ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದಾಖಲಾತಿ 5 ಕ್ಕಿಂತ ಕಡಿಮೆ ಇರುವ 485 ಶಾಲೆಗಳು ಹಾಗೂ 6 ರಿಂದ 10 ದಾಖಲಾತಿ ಇರುವ 782 ಶಾಲೆಗಳಿದ್ದು, ಇಂತಹ ಶಾಲೆಗಳನ್ನು ಮುಂದುವರೆಸುವುದರಿಂದ ಶಾಲೆಗಳಲ್ಲಿ ಕಲಿಕಾ ವಾತಾವರಣ ಉಂಟಾಗದೆ ಶಿಕ್ಷಣದಲ್ಲಿನ ಗುಣಮಟ್ಟ ಕಡಿಮೆಯಾವ ಸಾಧ್ಯತೆ ಇದೆ. ಅಲ್ಲದೆ ಈಗ ಕೇಂದ್ರ ಸರ್ಕಾರದ ಸೂಚನೆಯಂತೆ ಏಕೋಪಾಧ್ಯಾಯ ಶಾಲೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆಗೊಳಿಸುವ ಸೂಚನೆಯನ್ನು ಅನುಸರಿಸಿದರೆ ಆರ್ಥಿಕವಾಗಿ ಯುಕ್ತವಾಗುವುದಿಲ್ಲ ಎಂಬ ಅಂಶವನ್ನು ಸಭೆಯು ಚರ್ಚಿಸಿತು. ಈ ಮಕ್ಕಳು ಹತ್ತಿರದ ಪ್ರಾಥಮಿಕ ಶಾಲೆಗಳಿಗೆ ಹೋಗಿ ಬರುವುದಕ್ಕೆ ಸಾರಿಗೆ ಭತ್ಯೆಯನ್ನು ತಿಂಗಳಿಗೆ ಗರಿಷ್ಠ ರೂ 250–00 ರಂತೆ ಪ್ರತಿ ಮಗುವಿಗೆ ನೀಡುವುದರಿಂದ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಬಹುದು. ಜೊತೆಗೆ ಗುಣಾತ್ಮಕವಾದ ಶಿಕ್ಷಣವನ್ನು ಕೊಡಬಹುದೆಂದು ಸಭೆಯು ಅಭಿಪ್ರಾಯ ಪಟ್ಟಿತು. ಆದಾಗ್ಯೂ ಈ ರೀತಿ ಮಕ್ಕಳ ಸಂಖ್ಯೆ ಈ ಶಾಲೆಗಳಲ್ಲಿ ಏಕೆ ಕಡಿಮೆ ಆಗುತ್ತಿದೆ ಎಂಬ ಬಗ್ಗೆ ಒಂದು ಸಮೀಕ್ಷೆಯನ್ನು ನಡೆಸಿ ಕಾರಣಗಳನ್ನು ತಿಳಿಯುವುದು ಒಳ್ಳೆಯದು ಎಂಬ ಅಭಿಪ್ರಾಯವನ್ನು ಮಾನ್ಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಮತ್ತು ಡಾ : ಸುದರ್ಶನ್‌ರವರು ವ್ಯಕ್ತಪಡಿಸಿದರು. ಇದಲ್ಲದೆ ಸಭೆಯಲ್ಲಿ ಹಾಜರಿದ್ದ ಕೇಂದ್ರ ಸರ್ಕಾರದ ಪ್ರತಿನಿಧಿಗಳು; ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು; ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ; ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ; ರಾಜ್ಯ

ಕಾರ್ಯಕ್ರಮ ನಿರ್ದೇಶಕರು, ಮಹಿಳಾ ಸಾಮಖ್ಯ; ಹಾಗೂ ಸರ್ವ ಶಿಕ್ಷಣ ಅಭಿಯಾನ ಸಮಾಲೋಚಕರು ಚರ್ಚೆಯಲ್ಲಿ ಭಾಗವಹಿಸಿದರು.

**ತೀರ್ಮಾನ :**

- **5 ಕ್ಕಿಂತ ಕಡಿಮೆ ಮಕ್ಕಳು ವ್ಯಾಸಂಗ ಮಾಡುತ್ತಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು 2009-10 ನೇ ಸಾಲಿನಿಂದ ಮುಚ್ಚಲು ಕ್ರಮ ಮಾಡುವುದು ಹಾಗೂ ಆ ಮಕ್ಕಳು ಹತ್ತಿರದ ಪ್ರಾಥಮಿಕ ಶಾಲೆಗಳಿಗೆ ಹೋಗಿಬರುವ ಸಾರಿಗೆ ಭತ್ಯೆಯನ್ನು ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಭರಿಸಲು ಕ್ರಮವಹಿಸುವುದು.**
- **6 ರಿಂದ 10 ಮಕ್ಕಳಿರುವ ಶಾಲೆಗಳನ್ನು ಮುಚ್ಚುವ ಸಂಬಂಧ ಮುಂದಿನ ದಿನಗಳಲ್ಲಿ ಪರ್ಯಾಲೋಚಿಸಬಹುದು. ಅದಕ್ಕೆ ಮುನ್ನ ಈ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕುಸಿಯುತ್ತಿರುವುದಕ್ಕೆ ಕಾರಣಗಳನ್ನು ತಿಳಿಯಲು ಒಂದು ಸಮೀಕ್ಷೆಯನ್ನು ಕೈಗೊಳ್ಳುವುದು.**
- **ಈ ರೀತಿ ಮುಚ್ಚಲಾಗುವ 485 ಶಾಲೆಗಳಲ್ಲಿನ ಶಿಕ್ಷಕರುಗಳನ್ನು ರಾಜ್ಯದಲ್ಲಿನ ಇತರೆ ಏಕೋಪಾಧ್ಯಾಯ ಶಾಲೆಗಳಿಗೆ ನಿಯುಕ್ತಿಗೊಳಿಸಿ ಆ ಶಾಲೆಗಳಲ್ಲಿ ಪ್ರತಿ ಶಾಲೆಗೆ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುವಂತೆ ಜಿಲ್ಲಾ ಮಟ್ಟದಲ್ಲಿ ಕ್ರಮ ವಹಿಸುವುದು.**

**(ಕ್ರಮ : ಆಯುಕ್ತರು, ಸಾ.ಶಿ.ಇ ಹಾಗೂ ಸಾರ್ವತ್ರಿಕ ಅವಕಾಶ ಶಾಖೆ, ಎಸ್‌ಎಸ್‌ಎ)**

**<u>ಅಜೆಂಡಾ 6, ಕ್ರಮ ಸಂಖ್ಯೆ 2 :</u>**

**ಎಲ್ಲಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 8 ನೇ ತರಗತಿಯನ್ನು ಸೇರಿಸುವ ಬಗ್ಗೆ :**

ರಾಜ್ಯ ಯೋಜನಾ ನಿರ್ದೇಶಕರು ವಿಷಯ ಪ್ರಸ್ತಾಪಿಸುತ್ತಾ, ಈ ಬಗ್ಗೆ ಕೇಂದ್ರ ಸರ್ಕಾರದ ಎಂ.ಹೆಚ್.ಆರ್.ಡಿ ಯ ಮಾನ್ಯ ಕಾರ್ಯದರ್ಶಿಗಳಿಂದ ರಾಜ್ಯ ಸರ್ಕಾರಕ್ಕೆ ಅ.ಸ.ಪತ್ರ ಬಂದಿರುವ ಬಗ್ಗೆ ವಿವರಿಸಿದರು.

ಈ ಕುರಿತು ದೀರ್ಘವಾದ ಚರ್ಚೆ ನಡೆಯಿತು. ಕೇಂದ್ರ ಸರ್ಕಾರದ ಪ್ರತಿನಿಧಿ; ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು; ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು; ಆಯುಕ್ತರು, ಸಾ.ಶಿ.ಇ; ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ; ಸಮಾಲೋಚಕರು, ಸರ್ವ ಶಿಕ್ಷಣ ಅಭಿಯಾನ; ಡಾ: ಸುದರ್ಶನ್; ಶ್ರೀಮತಿ ಸುಶೀಲಮ್ಮ; ರಾಜ್ಯ ಕಾರ್ಯಕ್ರಮ ನಿರ್ದೇಶಕರು, ಮಹಿಳಾ ಸಾಮಖ್ಯ; ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಇವರು ಚರ್ಚೆಯಲ್ಲಿ ಭಾಗವಹಿಸಿ, ಅಮೂಲ್ಯ ಸಲಹೆ ಸೂಚನೆ ನೀಡಿದರು.

- ಶಿಕ್ಷಣ ಸಾರ್ವತ್ರೀಕರಣ ಮತ್ತು ಸಂವಿಧಾನದ ಆಶಯದಂತೆ 14 ವಯೋಮಿತಿಯ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕಾಗಿರುವುದರಿಂದ ಈ ವ್ಯಾಪ್ತಿಯಲ್ಲಿ 8 ನೇ ತರಗತಿಗಳು ಸೇರುತ್ತದೆ.

- ಪ್ರೌಢ ಶಾಲಾ ಹಂತಕ್ಕೆ ಮತ್ತು ಹಿರಿಯ ಪ್ರಾಥಮಿಕ ಶಾಲೆಯ ಹಂತಕ್ಕೆ ಮಗು ತನ್ನ ನಿವಾಸದಿಂದ ಶಾಲೆಗೆ ಹೋಗಲು ಅನುಕ್ರಮವಾಗಿ 5 ಕಿ.ಮೀ. ಮತ್ತು 3 ಕಿ.ಮೀ.ಗಿಂತ ಹೆಚ್ಚು ಚಲಿಸಬಾರದು. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಶಿಕ್ಷಣ ಕ್ರಮದಂತೆ, ಪ್ರಾಥಮಿಕ ಶಾಲೆಯ ತರಗತಿ ವ್ಯಾಪ್ತಿಗೆ 8ನೇ ತರಗತಿಯನ್ನು ತರಲಾಗಿದೆ. ರಾಜ್ಯದ ಪ್ರಾಥಮಿಕ ಶಾಲೆಗಳಿಗೆ ಯಾಂತ್ರಿಕವಾಗಿ 8ನೇ ತರಗತಿಯನ್ನು ಅಳವಡಿಸುವುದರಿಂದ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. ಈಗಾಗಲೇ ಅನುದಾನ ಪಡೆಯುತ್ತಿರುವ ಶಾಲೆಗಳ ಮತ್ತು ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಆಧರಿಸಿ ನೀಡಲಾಗಿರುವ ಶಿಕ್ಷಕರ ಹುದ್ದೆಗಳನ್ನು ಸ್ಥಳಾಂತರ ಇತ್ಯಾದಿ.
- ಹತ್ತಿರದಲ್ಲಿ ಪ್ರೌಢಶಾಲೆ ಇದ್ದ ಸಮಯದಲ್ಲಿ ಪೋಷಕರ ಆಯ್ಕೆಯು ಪ್ರೌಢ ಶಾಲೆಯ 8ನೇ ತರಗತಿಗೆ ಸೇರಿಸುವುದು ಆಗಿರುತ್ತದೆಯೇ ವಿನ: ಪ್ರಾಥಮಿಕ ಶಾಲೆಯ 8ನೇ ತರಗತಿಯಲ್ಲಿ ಮುಂದುವರಿಯುವುದು ಆಗಿರುವುದಿಲ್ಲ. ಪ್ರಯುಕ್ತ ರಾಜ್ಯದಲ್ಲಿ 4146 ಹಿರಿಯ ಪ್ರಾಥಮಿಕ ಶಾಲೆಗಳನ್ನು ಮೇಲ್ದರ್ಜೆಗೇರಿಸಿ 8ನೇ ತರಗತಿಯನ್ನು ಅಳವಡಿಸಲಾಗಿದೆ. ಆದ್ದರಿಂದ 8ನೇ ತರಗತಿಯನ್ನು ಕಲಿಯಲು ಅರ್ಹರಾದ ಎಲ್ಲಾ ಮಕ್ಕಳಿಗೆ ಮೇಲ್ದರ್ಜೆಗೇರಿಸಿರುವ ಪ್ರಾಥಮಿಕ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣವನ್ನು ಒದಗಿಸಲು ಈ ಶಾಲೆಗಳಲ್ಲಿ ಭೌತಿಕ ಸೌಲಭ್ಯವನ್ನು ಹೆಚ್ಚಿಸುವುದಲ್ಲದೇ ಕಲಾ ವಿಭಾಗದಲ್ಲಿ ಪದವೀಧರ ಶಿಕ್ಷಕರನ್ನು ಒದಗಿಸುವುದು.

**ತೀರ್ಮಾನ :-**

- **ಚಾರಿತ್ರಿಕವಾಗಿ ರಾಜ್ಯದಲ್ಲಿ ಜಾರಿಯಲ್ಲಿರುವಂತೆ 5 + 2 + 3 ವ್ಯವಸ್ಥೆಯನ್ನು ಮುಂದುವರೆಸಲು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವುದು.**
- **ಪ್ರೌಢಶಾಲೆಗಳಲ್ಲಿ ಈಗಿರುವಂತೆ 8ನೇ ತರಗತಿಯನ್ನು ಮುಂದುವರಿಸಿಕೊಂಡು ಹೋಗುವುದು.**
- **ಈಗಾಗಲೇ ಮೇಲ್ದರ್ಜೆಗೇರಿಸಿರುವ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಮೂಲಭೂತ ಹಾಗೂ ಭೌತಿಕ ಸೌಲಭ್ಯಗಳನ್ನು ಹೆಚ್ಚಿಸುವುದಲ್ಲದೇ, ಈ ಶಾಲೆಗಳಿಗೆ ಕಲಾ ವಿಭಾಗದ ತಲಾ ಒಂದು ಪದವೀಧರ ಶಿಕ್ಷಕರನ್ನು ಒದಗಿಸಲು ಕೇಂದ್ರ ಸರ್ಕಾರವನ್ನು ಕೋರುವುದು.**

**(ಕ್ರಮ : ಪ್ರಧಾನ ಕಾರ್ಯದರ್ಶಿಗಳು, ಪ್ರಾ. ಹಾಗೂ ಪ್ರೌ. ಶಿಕ್ಷಣ ಇಲಾಖೆ, ಯೋಜನಾ & ಆಡಳಿತ ಶಾಖೆ, ಎಸ್‌ಎಸ್‌ಎ, ಮತ್ತು ಆಯುಕ್ತರು, ಸಾಶಿಇ, ಬೆಂಗಳೂರು)**

**<u>ಅಜೆಂಡಾ 6, ಕ್ರಮ ಸಂಖ್ಯೆ (3) ಹಾಗೂ ಕ್ರ. ಸಂಖ್ಯೆ (5):</u>**

**8ನೇ ತರಗತಿಯನ್ನು ಸೇರ್ಪಡೆ ಮಾಡಿರುವ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಬಿ.ಎ., ಬಿ.ಎಡ್ ಶಿಕ್ಷಕರ ನೇಮಕಾತಿ ಮತ್ತು ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಮಂಜೂರಾಗಿರುವ 5545**

**ಪದವೀಧರ ತರಬೇತಿ ಹೊಂದಿದ ಶಿಕ್ಷಕರ (ಪಿಸಿಎಂ) ಹುದ್ದೆಗಳಲ್ಲಿ 4146 ಹುದ್ದೆಗಳನ್ನು ಬಳಸಿಕೊಂಡಿದ್ದು, ಬಾಕಿ ಉಳಿದ 1399 ಹುದ್ದೆಗಳನ್ನು ಬಳಸಿಕೊಳ್ಳುವ ಬಗ್ಗೆ :**

2003–04ನೇ ಸಾಲಿನಿಂದ ಇದುವರೆಗೆ ರಾಜ್ಯದಲ್ಲಿ 5545 ಟಿ.ಜಿ.ಟಿ ಹುದ್ದೆಗಳು 8ನೇ ತರಗತಿ ಸೇರ್ಪಡೆಯಾಗಿರುವ ಶಾಲೆಗಳಿಗೆ ಮಂಜೂರಾಗಿದ್ದು, ಈ ಪೈಕಿ 4146 ಹುದ್ದೆಗಳನ್ನು ಮಾತ್ರ ಬಳಸಿಕೊಳ್ಳಲಾಗಿದೆ. ಉಳಿದ 1399 ಹುದ್ದೆಗಳನ್ನು ಬಳಸಿಕೊಳ್ಳುವ ಬಗ್ಗೆ ಹಾಗೂ ಉನ್ನತೀಕರಿಸಿದ 8 ನೇ ತರಗತಿ ಒಳಗೊಂಡ ಪ್ರಾಥಮಿಕ ಶಾಲೆಗಳಿಗೆ ಕಲಾ ವಿಭಾಗದ ಪದವೀಧರ ಶಿಕ್ಷಕರನ್ನು ಒದಗಿಸುವ ಬಗ್ಗೆ ಚರ್ಚಿಸಲಾಯಿತು. ಕೇಂದ್ರ ಸರ್ಕಾರದ ಪ್ರತಿನಿಧಿ; ಮಾನ್ಯ ಪ್ರಾಥಮಿಕ ಹಾಗೂ ಪ್ರೌಡ ಶಿಕ್ಷಣ ಸಚಿವರು; ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ; ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ; ಹಾಗೂ ಡಾ: ಸುದರ್ಶನ್‌ರವರು ಭಾಗವಹಿಸಿ ಅಮೂಲಾಗ್ರವಾದ ಚರ್ಚೆ ನಡೆಸಿದರು. ಡಾ:ಸುದರ್ಶನ್ ರವರು NRHM ಯೋಜನೆ ಕಾರ್ಯ ತಂತ್ರಗಳನ್ನು ಸರ್ವ ಶಿಕ್ಷಣ ಅಭಿಯಾನ ಅನುಷ್ಠಾನಕ್ಕೆ ಅಳವಡಿಸಿಕೊಳ್ಳಲು ತುಂಬಾ ನಮ್ಯತೆ ಇದೆ. ಅಂತಹ ನಮ್ಯತೆಯನ್ನು ಸರ್ವ ಶಿಕ್ಷಣ ಅಭಿಯಾನ ಯೋಜನೆಯಲ್ಲಿಯೂ ತರಬೇಕು. ಈ ಹುದ್ದೆಗಳನ್ನು ಎಲ್ಲಿ ಅಗತ್ಯ ಇದೆಯೋ ಅಂತಹ ಪ್ರೌಢಶಾಲೆಗಳಲ್ಲಿ ಉಪಯೋಗಿಸಿಕೊಳ್ಳಲು ಅನುಮತಿ ಕೊಡುವುದು ಸೂಕ್ತ ಎಂಬ ಸಲಹೆಯನ್ನು ನೀಡಿದರು. ಈ ಹುದ್ದೆಗಳನ್ನು ಪ್ರಾಥಮಿಕ ಶಾಲೆಗಳಿಗೆ ಮಾತ್ರವೇ ನೀಡಲು ಅವಕಾಶ ಇರುವುದಾಗಿ ಕೇಂದ್ರ ಸರ್ಕಾರದ ಪ್ರತಿನಿಧಿಯವರು ತಿಳಿಸಿದರು. ಇದನ್ನು ಅನುಸರಿಸಿ ಮೇಲ್ದರ್ಜೆಗೇರಿಸಿದ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಗುಣಮಟ್ಟವನ್ನು ತರುವ ದೃಷ್ಟಿಯಿಂದ ಕಲಾ ಶಿಕ್ಷಕರು ಒಬ್ಬರನ್ನು ನೀಡುವುದು ಉಚಿತ ಎಂಬ ಅಭಿಪ್ರಾಯ ಮೂಡಿ ಬಂದಿತು. ಇದಕ್ಕೆ ಪ್ರತಿಯಾಗಿ ರಾಜ್ಯವು ರಾಷ್ಟ್ರೀಯ ಮಟ್ಟದಲ್ಲಿ ನಿಗದಿಯಾಗಿರುವ ಶಾಲಾ ಹಂತಗಳನ್ನು ಅನುಸರಿಸಿದರೆ ಇಂತಹ ಸೌಲಭ್ಯಗಳು ದೊರೆಯುತ್ತವೆ ಎಂಬ ಅಭಿಪ್ರಾಯವು ಕೂಡ ಪ್ರಸ್ತಾಪವಾಯಿತು. ರಾಜ್ಯದಲ್ಲಿ ಪೂರ್ಣವಾಗಿ ರಾಷ್ಟ್ರೀಯ ಶಿಕ್ಷಣ ಹಂತದ ಚೌಕಟ್ಟನ್ನು ಅನುಸರಿಸದೇ ಹೋದಾಗ್ಯೂ ಕೂಡ ಅಂಶಿಕವಾಗಿ ಸಧ್ಯಕ್ಕೆ 4146 ಶಾಲೆಗಳಲ್ಲಿ ಪ್ರಸ್ತುತ ಚೌಕಟ್ಟನ್ನೇ ಅನುಸರಿಸಲಾಗುತ್ತಿದೆ. ಈ ಶಾಲೆಗಳಲ್ಲಿನ 8ನೇ ತರಗತಿಯ ಗುಣಮಟ್ಟವನ್ನು ಕಾಯ್ದುಕೊಳ್ಳುವ ಸಲುವಾಗಿ 4146 ಹುದ್ದೆಗಳನ್ನು ಮಂಜೂರು ಮಾಡುವುದು ತರ್ಕಬದ್ಧವಾಗಿರುತ್ತದೆ.

**ತೀರ್ಮಾನ :**

- **ಈಗಾಗಲೇ ಮಂಜೂರಾಗಿದ್ದು, ಬಳಕೆಯಾಗದೇ ಇರುವ 1399 ಪದವೀಧರ ಹುದ್ದೆಗಳನ್ನು ಕಲಾ ಶಿಕ್ಷಕರ ಹುದ್ದೆಗಳನ್ನಾಗಿ ಪರಿವರ್ತನೆ ಮಾಡಲು ಹಾಗೂ ಉಳಿದ 2747 ಶಾಲೆಗಳಿಗೆ ಹೆಚ್ಚುವರಿ ಟಿ.ಜಿ.ಟಿ ಕಲಾ ಹುದ್ದೆಗಳನ್ನು ಮಂಜೂರು ಮಾಡಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ಪತ್ರ ಬರೆಯುವುದು.**
- **ಈ ನಿಟ್ಟಿನಲ್ಲಿ ಕ್ರಮ ವಹಿಸಿ 2009–10 ನೇ ಸಾಲಿನ ಸರ್ವ ಶಿಕ್ಷಣ ಅಭಿಯಾನ AWP & B ತಯಾರಿಸಲು ತೀರ್ಮಾನಿಸಲಾಯಿತು.**

(ಕ್ರಮ : ಯೋಜನೆ ಮತ್ತು ಆಡಳಿತ ಶಾಖೆ, ಎಸ್‌ಎಸ್‌ಎ)

**ಅಜೆಂಡಾ 6, ಕ್ರಮ ಸಂಖ್ಯೆ 4:**

**ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳ 3 ಮತ್ತು 4 ನೇ ತರಗತಿಗಳಲ್ಲಿ ನಲಿ-ಕಲಿ ಕಾರ್ಯಕ್ರಮವನ್ನು ವಿಸ್ತರಿಸುವ ಬಗ್ಗೆ:**

ಈ ವಿಷಯದ ಬಗ್ಗೆ ನಡೆದ ಚರ್ಚೆಯಲ್ಲಿ ಶ್ರೀಮತಿ ಸುಶೀಲಮ್ಮ; ಡಾ: ಸುದರ್ಶನ್; ಸಮಾಲೋಚಕರು, ಸರ್ವ ಶಿಕ್ಷಣ ಅಬಿಯಾನ; ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಹಾಗೂ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರುಗಳು ಭಾಗವಹಿಸಿ ಅಮೂಲ್ಯ ಸಲಹೆ, ಸೂಚನೆ ನೀಡಿದರು.

ನಲಿ-ಕಲಿ ಕಾರ್ಯಕ್ರಮದ ತರಗತಿ ಆಚರಣೆ ಕುರಿತು ಸದಸ್ಯರೆಲ್ಲರೂ ಸದಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. 2009-10ನೇ ಸಾಲಿಗೆ ರಾಜ್ಯದ ಎಲ್ಲಾ ಶಾಲೆಗಳಲ್ಲಿ 1 ಮತ್ತು 2 ನೇ ತರಗತಿಗೆ ನಲಿ-ಕಲಿ ಮಾದರಿ ಕಲಿಕೆಯನ್ನು ಅಳವಡಿಸಲಾಗುವುದು ಎಂಬ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು. ಹಾಗೂ 2010-11 ನೇ ಸಾಲಿನಿಂದ ರಾಜ್ಯದ ಎಲ್ಲಾ ಶಾಲೆಗಳ 3 ಮತ್ತು 4 ನೇ ತರಗತಿಯ ಮಕ್ಕಳಿಗೆ ನಲಿ-ಕಲಿ ಮಾದರಿಯಲ್ಲಿ ತರಗತಿ ಆಚರಣೆಯನ್ನು ಅಳವಡಿಸುವ ಬಗ್ಗೆ ಸಭೆಯು ಸಹಮತವನ್ನು ವ್ಯಕ್ತಪಡಿಸಿತು. ಆದರೆ ಎಲ್ಲಾ ಅಧ್ಯಾಪಕರಿಗೂ ಸಮರ್ಪಕವಾಗಿ ತರಬೇತಿ ನೀಡುವುದು ಅತ್ಯಂತ ಪ್ರಮುಖ ವಿಚಾರವೆಂದು ಸಭೆಯು ಅಭಿಪ್ರಾಯ ವ್ಯಕ್ತಪಡಿಸಿದರು.

ನಲಿ-ಕಲಿ ತರಗತಿಯ ಆಚರಣೆಯು ಮಕ್ಕಳಿಗಷ್ಟೇ ಆಗಿದ್ದರೂ ಶಿಕ್ಷಕರ ಮತ್ತು ಮಕ್ಕಳ ಅನುಪಾತ ಕಡಿಮೆ ಇದ್ದರೆ ಮಾತ್ರ ಇದು ವ್ಯವಸ್ಥಿತವಾಗಿ ನಡೆಯುತ್ತದೆ ಎಂಬ ಅಭಿಪ್ರಾಯವು ಬಂದಿತು. ಆದ್ದರಿಂದ ರಾಜ್ಯದ ಎಲ್ಲಾ ಜಿಲ್ಲೆಗಳ ಶಿಕ್ಷಕ ಮತ್ತು ಮಕ್ಕಳ ಅನುಪಾತವನ್ನು ಮರು ಹೊಂದಾಣಿಕೆ ಮಾಡುವ ಅಗತ್ಯ ಇರುತ್ತದೆ ಹಾಗೂ ಶಿಕ್ಷಕರ ಮತ್ತು ಮಕ್ಕಳ ಅನುಪಾತಕ್ಕೆ ಸಂಬಂಧಿಸಿದಂತೆ ಒಂದು ನಿಲುವನ್ನು ತಳೆಯಬೇಕೆಂಬ ಅಭಿಪ್ರಾಯವು ಮೂಡಿ ಬಂದಿತು.

**ತೀರ್ಮಾನ :**

- **2010-11 ನೇ ಸಾಲಿಗೆ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ 3 ಮತ್ತು 4 ನೇ ತರಗತಿಯಲ್ಲಿ ಕಲಿಯುತ್ತಿರುವ ಮಕ್ಕಳಿಗೆ ನಲಿ ಕಲಿ ತರಗತಿಯ ಆಚರಣೆಯನ್ನು ಅಳವಡಿಸುವುದು.**
- **ಶಿಕ್ಷಕ ಮತ್ತು ಮಕ್ಕಳ ಅನುಪಾತವನ್ನು ಪರಿಶೀಲಿಸಿ ಕ್ರಮಬದ್ಧಗೊಳಿಸುವುದು.**
- **ಮಕ್ಕಳ ಮತ್ತು ಶಿಕ್ಷಕರ ಅನುಪಾತವನ್ನು ನಲಿ-ಕಲಿ ಆಚರಣೆಗೆ ಸಂಬಂಧಿಸಿದಂತೆ ಪರಿಶೀಲನೆ ಮಾಡಿ ನಿಗಧಿಗೊಳಿಸುವುದು.**
- **2009-10 ನೇ ಸಾಲಿನಲ್ಲಿ ಈ ನಿಟ್ಟಿನಲ್ಲಿ ಅಗತ್ಯವಾದ ಪೂರ್ವ ಸಿದ್ಧತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.**

**(ಕ್ರಮ : ಗುಣಮಟ್ಟ ಶಾಖೆ,**

**ಎಸ್ಎಸ್ಎ; ಡಿಎಸ್ಇಆರ್‌ಟಿ**

**ಮತ್ತು ಆಯುಕ್ತರು,**

**ಸಾಶಿಇ, ಬೆಂಗಳೂರು**

**ಅಜೆಂಡಾ 6, ಕ್ರಮ ಸಂಖ್ಯೆ 6:**

**ಬೆಂಗಳೂರು ನಗರದ 620 ಸರ್ಕಾರಿ ಶಾಲೆಗಳಲ್ಲಿ ಅನುಷ್ಠಾನಗೊಂಡಿರುವ ಶೂನ್ಯ ತರಗತಿಗಳನ್ನು ಮುಂದಿನ ವರ್ಷಗಳಲ್ಲಿ ಮುಂದುವರಿಸಿಕೊಂಡು ಹೋಗುವ ಬಗ್ಗೆ:**

ಈ ವಿಷಯಕ್ಕೆ ಸಂಬಂಧಿಸಿದ ಚರ್ಚೆಯಲ್ಲಿ ಪ್ರಧಾನ ಕಾರ್ಯದರ್ಶಿಗಳು; ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ; ಡಾ: ಸುದರ್ಶನ್; ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ; ಸಮಾಲೋಚಕರು, ಸರ್ವ ಶಿಕ್ಷಣ ಅಭಿಯಾನ; ಶ್ರೀಮತಿ ಸುಶೀಲಮ್ಮ; ಎಂ.ಹೆಚ್.ಆರ್.ಡಿ ಪ್ರತಿನಿಧಿ; ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು; ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು (ಅಭಿವೃದ್ಧಿ), ಕರ್ನಾಟಕ ಸರ್ಕಾರರವರುಗಳು ಸಕ್ರಿಯವಾಗಿ ಭಾಗವಹಿಸಿ ಸಲಹೆ ಸೂಚನೆ ನೀಡಿದರು.

- ಬೆಂಗಳೂರು ನಗರದಲ್ಲಿ 620 ಶೂನ್ಯ ತರಗತಿಗಳು ಪ್ರಾರಂಭವಾದ ಹಿನ್ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವತಿಯಿಂದ ಬಂದ ಆಕ್ಷೇಪಣೆಯಂತೆ, ಅಂದರೆ ಅಂಗನವಾಡಿ ಮಕ್ಕಳ ಸಂಖ್ಯೆ ಇಳಿಮುಖವಾಗುತ್ತಿದೆ ಎಂಬ ಸಂಗತಿಯನ್ನು ಆಧರಿಸಿ ಚರ್ಚೆಯು ನಡೆಯಿತು. ಸದಸ್ಯರ ಅಭಿಪ್ರಾಯದಂತೆ ಇಡೀ ಪೂರ್ವ ಪ್ರಾಥಮಿಕ ಶಾಲೆಯು ಶಿಕ್ಷಣ ಇಲಾಖೆಯ ಕಕ್ಷೆಗೆ ಬರುವುದು ಉಚಿತವೆಂದು ಅಭಿಪ್ರಾಯ ಪಡಲಾಯಿತು. ಈಗಿನ ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಕೆಲಸದ ಒತ್ತಡದಲ್ಲಿ ಬೋಧನೆಯನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಆದರೆ ಮಕ್ಕಳನ್ನು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ತಂದರೆ ಉದ್ಭವವಾಗಬಹುದಾದ ಕೆಲವು ಸಮಸ್ಯೆಗಳನ್ನು ಚರ್ಚಿಸಲಾಯಿತು.
- ಭಾಗ್ಯಲಕ್ಷ್ಮಿ ಯೋಜನೆಯನ್ನು ಹೆಣ್ಣುಮಕ್ಕಳಿಗೆ ವಿಸ್ತರಿಸಲು 0 ಯಿಂದ 6 ವರ್ಷದವರೆಗೆ ಮಗು ಅಂಗನವಾಡಿಯಲ್ಲಿ ಕಲಿಯಬೇಕು ಎಂಬ ಷರತ್ತು ಇರುತ್ತದೆ. ಅದನ್ನು ಬದಲಾಯಿಸಬೇಕು. ಅಂದರೆ ಅಂಗನವಾಡಿ ಅಥವಾ ಪ್ರಾಥಮಿಕ ಶಾಲೆಗಳಲ್ಲಿ ವ್ಯಾಸಂಗ ಎಂದು ಬದಲಾಯಿಸಬೇಕಾಗಿರುತ್ತದೆ ಎಂಬ ಅಭಿಪ್ರಾಯ ಮೂಡಿತು.
- 4.10 ವರ್ಷದಿಂದ 5.10 ವರ್ಷದವರೆಗೆ ಮಕ್ಕಳನ್ನು ಪ್ರಾಥಮಿಕ ಶಾಲೆಗಳ ಜೊತೆ ಸೇರಿಸುವುದರಿಂದ ಪ್ರಾಥಮಿಕ ಶಾಲೆಗಳ ಗುಣಮಟ್ಟವು ವೃದ್ಧಿಯಾಗುತ್ತದೆ ಎಂಬ ಅಭಿಪ್ರಾಯವು ಮೂಡಿ ಬಂದಿತು.
- ಶೂನ್ಯ ತರಗತಿ ಎಂಬ ಹೆಸರು ಧ್ವನಿಪೂರ್ಣ ಆಗಿಲ್ಲದ ಕಾರಣ, ಕಾರ್ಯಕ್ರಮದ ಹೆಸರನ್ನು ಬದಲಾಯಿಸುವಂತೆ ಸಲಹೆ ವ್ಯಕ್ತವಾಯಿತು.
- 4.10 ವರ್ಷದಿಂದ 5.10 ವರ್ಷದವರೆಗಿನ ಮಕ್ಕಳು ಪ್ರಾಥಮಿಕ ಶಾಲೆಗಳಲ್ಲಿ ಕಲಿಯಲು ಅನುಕೂಲವಾಗುವಂತಹ ವ್ಯವಸ್ಥೆಯೊಂದನ್ನು ರೂಪಿಸಬೇಕು.
- ಭಾಗ್ಯಲಕ್ಷ್ಮಿ ಯೋಜನೆಯ ವಿಸ್ತರಣೆಯ ಸಂದರ್ಭದಲ್ಲಿ ಇರುವ ಒಂದು ಷರತ್ತಿಗೆ, 6 ವರ್ಷಗಳ ಶಿಕ್ಷಣ ಅಂದರೆ ಅಂಗನವಾಡಿ ಅಥವಾ ಪ್ರಾಥಮಿಕ ಶಾಲೆ ಎಂದು ಬದಲಾಯಿಸುವುದು.

**ತೀರ್ಮಾನ :**

- **ಅಂಗನವಾಡಿ ಮಕ್ಕಳ ಶಿಕ್ಷಣದ ಗುಣಮಟ್ಟವನ್ನು ವೃದ್ಧಿಸುವ ದೃಷ್ಟಿಯಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ಪುನಶ್ಚೇತನ ತರಬೇತಿಗಳನ್ನು ಹಮ್ಮಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು.**
- **ಶೂನ್ಯ ತರಗತಿ ಎಂಬ ಹೆಸರಿಗೆ ಬದಲಾಗಿ ಧ್ವನಿಪೂರ್ಣವಾದ ಹೆಸರೊಂದನ್ನು ಬಳಸುವುದು, ಹಾಗೂ ಬೆಂಗಳೂರು ನಗರ ಜಿಲ್ಲೆಯಲ್ಲಿ ಈ ವ್ಯವಸ್ಥೆಯನ್ನು 5 ರಿಂದ 5 ವರ್ಷ 10 ತಿಂಗಳ ವಯೋಮಾನದ ಮಕ್ಕಳಿಗೆ ಸರ್ವ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ಮುಂದುವರಿಸುವುದು.**

**(ಕ್ರಮ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸ.ಶಿ.ಅ)**

**<u>ಅಜೆಂಡಾ 6, ಕ್ರಮ ಸಂಖ್ಯೆ 7:</u>**

**ಪುರಸಭೆ, ಪಟ್ಟಣ ಪಂಚಾಯಿತಿ ಹಾಗೂ ನಗರಪಾಲಿಕೆಗಳ ವ್ಯಾಪ್ತಿಯಲ್ಲಿನ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಎಸ್‌ಡಿಎಂಸಿ ರಚನೆ ಕುರಿತು. :**

ಈ ವಿಷಯದಲ್ಲಿ ನಡೆದ ಚರ್ಚೆಯಲ್ಲಿ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು; ಕೇಂದ್ರ ಸರ್ಕಾರದ ಪ್ರತಿ ನಿಧಿ; ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ; ಹಾಗೂ ಡಾ: ಸುದರ್ಶನ್ ರವರುಗಳು ಭಾಗವಹಿಸಿ ಚರ್ಚೆಯನ್ನು ಅರ್ಥಪೂರ್ಣ ರೀತಿಯಲ್ಲಿ ನಡೆಸಿದರು. ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಎಸ್.ಡಿ.ಎಮ್.ಸಿಗಳ ರಚನೆ ಕುರಿತಂತೆ ದಿ.14.06.2006 ರಂದು ಸರ್ಕಾರಿ ಆದೇಶವು ಜಾರಿಯಾಗಿರುತ್ತದೆ. ಆದರೆ ಈ ಆದೇಶದನ್ವಯ ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ನಗರಪಾಲಿಕೆ ವ್ಯಾಪ್ತಿಯಲ್ಲಿನ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಎಸ್.ಡಿ.ಎಂ.ಸಿ ಗಳ ರಚನೆಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವನ್ನು ನೀಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ಅಲ್ಲಿನ ಶಾಲೆಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಕೊರತೆ ಏರ್ಪಟ್ಟಿದೆ ಎಂದು ಎಲ್ಲಾ ಸದಸ್ಯರು ಅಭಿಪ್ರಾಯಪಟ್ಟರು. ಕಿರಿಯ ಪ್ರಾಥಮಿಕ ಶಾಲೆ ಮತ್ತು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಈಗ ಇರುವ ಮಾದರಿಯಲ್ಲಿ ಎಸ್.ಡಿ.ಎಂ.ಸಿ ಗಳನ್ನು ಈ ಸ್ಥಳಗಳಲ್ಲಿ ರಚನೆ ಮಾಡುವ ಸಂಬಂಧ ಎಲ್ಲಾ ಸದಸ್ಯರು ಒಮ್ಮತವಾದ ಒಪ್ಪಿಗೆಯನ್ನು ನೀಡಿದರು.. ಎಸ್.ಡಿ.ಎಮ್.ಸಿ ಯಲ್ಲಿನ Monitoring ಪದಕ್ಕೆ ಬದಲಾಗಿ Management ಎಂಬ ಪದ ಬಳಕೆ ಹೆಚ್ಚು ಸಮರ್ಪಕ ಎಂಬ ಅಭಿಪ್ರಾಯವು ಬಂದಿತು.

**ತೀರ್ಮಾನ :**

- **ಪ್ರಾಥಮಿಕ ಶಾಲೆಗಳಲ್ಲಿ ಈಗ ಇರುವ ಎಸ್.ಡಿ.ಎಂ.ಸಿ ಮಾದರಿಯನ್ನು ಅನುಸರಿಸಿ ಪಟ್ಟಣ ಪ್ರದೇಶಗಳ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಎಸ್‌ಡಿಎಂಸಿಗಳನ್ನು ರಚಿಸುವ ಸಂಬಂಧ ಸರ್ಕಾರದ ಹಂತದಲ್ಲಿ ಆದೇಶವನ್ನು ಹೊರಡಿಸಲು ಕ್ರಮ ಕೈಗೊಳ್ಳುವುದು**

- Management ಎಂಬ ಶಬ್ಧವನ್ನು ಬಳಸುವ ಬಗ್ಗೆ ಪರಿಶೀಲನೆ ಮಾಡಿ ನಿರ್ಣಯಿಸಿ ಯುಕ್ತ ಅನಿಸಿದಲ್ಲಿ ಬಳಸುವುದು

(ಕ್ರಮ : ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಆಯುಕ್ತರು, ಸಾಶಿಇ, ಬೆಂಗಳೂರು)

<u>**ಅಜೆಂಡಾ 6, ಕ್ರಮ ಸಂಖ್ಯೆ 8:**</u>

**ಎಸ್‌ಎಸ್‌ಎ ಯೋಜನೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯ/ಜಿಲ್ಲೆ/ತಾಲ್ಲೂಕು ಮಟ್ಟದ ಅಧಿಕಾರಿ/ಸಿಬ್ಬಂದಿ ವರ್ಗದ ಹುದ್ದೆಗಳನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007 ರಿಂದ ವಿನಾಯಿತಿ ನೀಡಿ ಅನ್ಯ ಸೇವೆ ನಿರತರು ಎಂದು ಪರಿಗಣಿಸಿ ವರ್ಗಾವಣೆ ಮಾಡುವ ಕುರಿತು:**

ಈ ವಿಷಯದಲ್ಲಿ ನಡೆದ ವ್ಯಾಪಕವಾದ ಚರ್ಚೆಯಲ್ಲಿ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು; ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ; ಕೇಂದ್ರ ಸರ್ಕಾರದ ಪ್ರತಿನಿಧಿ; ಡಾ: ಸುದರ್ಶನ್; ಸಮಾಲೋಚಕರು, ಸರ್ವ ಶಿಕ್ಷಣ ಅಭಿಯಾನ; ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ; ಅಧ್ಯಕ್ಷರು, ಕರ್ನಾಟಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ; ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು; ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ; ನಿರ್ದೇಶಕರು, ಪ್ರೌಢ ಶಿಕ್ಷಣ; ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಹಾಗೂ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ರವರುಗಳು ಬಾಗವಹಿಸಿ, ಉದ್ಭವಿಸಿರುವ ಸಮಸ್ಯೆಯ ಬಗ್ಗೆ ವ್ಯಾಪಕ ಚರ್ಚೆ ನಡೆಸಿ ಅಮೂಲ್ಯ ಸಲಹೆ ನೀಡಿದರು.

ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಗುರಿಯನ್ನು ತಲುಪಲು ತ್ವರಿತ ಗತಿಯಲ್ಲಿ ಕಾರ್ಯಕ್ರಮಗಳು ನಡೆಯಬೇಕಾಗಿರುವುದರಿಂದ, CRP/BRP/BRC/IERT/DIET ಬೋಧಕ ವರ್ಗದವರನ್ನು ಪ್ರಸ್ತುತ ವರ್ಗಾವಣೆ ಅಧಿನಿಯಮದ ವ್ಯಾಪ್ತಿಯಿಂದ ಹೊರಗೆ ಇಡುವುದು ಸೂಕ್ತವೆಂಬ ಅಭಿಪ್ರಾಯ ಮೂಡಿ ಬಂದಿತು. ಜೊತೆಗೆ ಉಸ್ತುವಾರಿ ಮಾಡುವ ಅಧಿಕಾರಿಗಳ ಹುದ್ದೆಗಳನ್ನು ತುಂಬದೆ ದೀರ್ಘಾವಧಿ ಕಾಲದ ವರೆಗೆ ಖಾಲಿ ಉಳಿದರೆ ವ್ಯವಸ್ಥಿತವಾಗಿ ನಿರ್ವಹಣೆ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಮೇಲಿನ ಹುದ್ದೆಗಳಿಗೆ ವರ್ಗಾವಣೆ ಅಧಿನಿಯಮದಿಂದ ವಿನಾಯಿತಿ ನೀಡುವುದು ಉಚಿತ ಎಂಬ ಸಲಹೆ ಬಂದಿತು.

- ವರ್ಗಾವಣೆ ಅಧಿನಿಯಮದಲ್ಲಿ ಪ್ರವರ್ಗ A, B ಮತ್ತು C ಎಂದು ಸ್ಥಳ ವಿಂಗಡಣೆ ಮಾಡಿರುವುದು ಹಾಗೂ ಆಯಾ ವರ್ಷದ ಏಪ್ರಿಲ್, ಮೇ ಅವಧಿಯಲ್ಲಿ ಮಾತ್ರ ಕೌನ್ಸಿಲಿಂಗ್ ಮೂಲಕ ಹುದ್ದೆಗಳನ್ನು ಭರ್ತಿ ಮಾಡಲು ಇರುವ ತೊಂದರೆ ಬಗ್ಗೆ ಚರ್ಚಿಸಲಾಯಿತು.
- ಈ ಅಧಿನಿಯಮದಿಂದ ಉಂಟಾಗಿರುವ ಧನಾತ್ಮಕ ಪರಿಣಾಮಗಳನ್ನು ಗಮನಿಸಿದರೆ ಇಂತಹ ಬದಲಾವಣೆಯನ್ನು ಮಾಡದಿರುವುದು ಯುಕ್ತ ಎಂಬ ಅಭಿಪ್ರಾಯವನ್ನು ಡಾ: ಸುದರ್ಶನ್ ಅವರು

ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ ಅಧಿನಿಯಮವನ್ನು ಬದಲಾಯಿಸುವುದಕ್ಕಿಂತ ಮೊದಲು ಈ ಹುದ್ದೆಗಳನ್ನು ಭರ್ತಿ ಮಾಡಲು ಯಾವುದಾದರೂ ಪರ್ಯಾಯ ಮಾರ್ಗಗಳು ಇವೆಯೇ ಎಂಬ ಬಗ್ಗೆ ಪರ್ಯಾಲೋಚಿಸಬೇಕೆಂಬ ಸಲಹೆ ಮೂಡಿ ಬಂದಿತು.

**ತೀರ್ಮಾನ :**

**ವರ್ಗಾವಣೆ ಅಧಿನಿಯಮವನ್ನು ಬದಲಾಯಿಸುವ ಮೊದಲು ಸರ್ವ ಶಿಕ್ಷಣ ಅಭಿಯಾನದ ವ್ಯಾಪ್ತಿಯಲ್ಲಿನ ಹುದ್ದೆಗಳ ಭರ್ತಿಗೆ ಪರ್ಯಾಯ ಮಾರ್ಗಗಳು ಇವೆಯೇ ಎಂಬುದರ ಬಗ್ಗೆ ಪರಿಶೀಲನೆ ನಡೆಸಿ ನಿರ್ಧಾರಕ್ಕೆ ಬರುವುದು. ಒಂದು ವೇಳೆ ಅಧಿನಿಯಮದ ಬದಲಾವಣೆ ಅನಿವಾರ್ಯವೇ ಆದಲ್ಲಿ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು.**

**(ಕ್ರಮ : ಎಸ್‌ಎಸ್‌ಎ / ಆಯುಕ್ತರು, ಸಾಶಿಇ, ಬೆಂಗಳೂರು)**

**<u>ಅಜೆಂಡಾ 6, ಕ್ರಮ ಸಂಖ್ಯೆ 9:</u>**

**ರಾಷ್ಟ್ರೀಯ ಪಠ್ಯಕ್ರಮ ರೂಪುರೇಷೆಗಳು 2005 ರಂತೆ ಹೊಸ ಪಠ್ಯಕ್ರಮ / ಪಠ್ಯ ಪುಸ್ತಕಗಳ ರೂಪಿಸುವಿಕೆ:**

ಈ ವಿಷಯದಲ್ಲಿ ನಿರ್ದೇಶಕರು ಡಿ.ಎಸ್.ಇ.ಆರ್.ಟಿ ರವರು ಸಭೆಯ ಮುಂದೆ ವಿಷಯ ಮಂಡಿಸಿ, ಈಗಾಗಲೇ ಕೈಗೊಂಡಿರುವ ಕ್ರಮಗಳ ಬಗ್ಗೆ ಹಾಗೂ ಬಾಕಿ ಕರುವ ಕ್ರಮಗಳ ಬಗ್ಗೆ ಸುಧೀರ್ಘವಾಗಿ ವಿವರಿಸಿದರು. 2005 ರಾಷ್ಟ್ರೀಯ ಪಠ್ಯ ಕ್ರಮದ ಚೌಕಟ್ಟಿನ ಅಡಿಯಲ್ಲಿ ಹಂತಹಂತವಾಗಿ ಪಠ್ಯ ಪುಸ್ತಕಗಳನ್ನು ಬದಲಾವಣೆ ಮಾಡಲಾಗುವುದು.

**ತೀರ್ಮಾನ**

- **ಈಗಾಗಲೇ ಕೈಗೊಂಡಿರುವ ಕ್ರಮದ ಬಗ್ಗೆ ಸಭೆಯು ಒಪ್ಪಿಗೆ ಸೂಚಿಸಿತು.**
- **ಪಠ್ಯ ಪುಸ್ತಕಗಳನ್ನು ಪರಿಷ್ಕರಿಸುವಾಗ ಗುಣಾತ್ಮಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲು ಹಾಗೂ ಪಠ್ಯ ಪುಸ್ತಕಗಳ ಗುಣಮಟ್ಟವನ್ನು ಸುಧಾರಿಸಲು ತೀರ್ಮಾನಿಸಲಾಯಿತು.**

**(ಕ್ರಮ : ಡಿಎಸ್‌ಇಆರ್‌ಟಿ ಹಾಗೂ ಪಠ್ಯ ಪುಸ್ತಕ ಸಂಘ)**

**<u>ಅಜೆಂಡಾ 6, ಕ್ರಮ ಸಂಖ್ಯೆ 10:</u>**

**ಅವಿಷ್ಕೃತ ಚಟುವಟಿಕೆಯಡಿ ಚಿಣ್ಣರ ಸುವರ್ಣ ಕರ್ನಾಟಕ ದರ್ಶನ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮ :**

ಈ ವಿಷಯದ ಬಗ್ಗೆ ನಡೆದ ಚರ್ಚೆಯಲ್ಲಿ ಪ್ರಮುಖವಾಗಿ ರಾಜ್ಯ ಯೋಜನಾ ನಿರ್ದೇಶಕರು; ಡಾ: ಸುದರ್ಶನ್; ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರರವರುಗಳು ಭಾಗವಹಿಸಿ ಕಾರ್ಯಕ್ರಮದ ಬಗ್ಗೆ ಅಮೂಲಾಗ್ರವಾಗಿ ಚರ್ಚಿಸಿ ಅಮೂಲ್ಯ ಸಲಹೆಗಳನ್ನು ನೀಡಿದರು.

ಕರ್ನಾಟಕ ದರ್ಶನ ಶೈಕ್ಷಣಿಕ ಕಾರ್ಯಕ್ರಮವು ಒಂದು ಉಪಯುಕ್ತವಾದ ಕಾರ್ಯಕ್ರಮ ಎಂಬುದನ್ನು ಎಲ್ಲಾ ಸದಸ್ಯರು ಅಭಿಪ್ರಾಯಪಟ್ಟರು. ಇಂತಹ ಕಾರ್ಯಕ್ರಮಗಳನ್ನು ಹೆಚ್ಚು ಮಕ್ಕಳಿಗೆ ವಿಸ್ತರಿಸುವುದರಿಂದ ಮಕ್ಕಳ ಮನೋವಿಕಾಸಕ್ಕೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವು ವ್ಯಕ್ತವಾಗಿರುತ್ತದೆ. ಆದರಿಂದ ಹೆಚ್ಚು ಹಣವನ್ನು ಮಂಜೂರು ಮಾಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ತೀರ್ಮಾನಿಸಲಾಯಿತು.

ಚಾಲ್ತಿಯಲ್ಲಿರುವ ಕರ್ನಾಟಕ ದರ್ಶನ ಕಾರ್ಯಕ್ರಮದ ವಿನ್ಯಾಸವು ರಾಜ್ಯಮಟ್ಟವನ್ನು ಒಳಗೊಂಡಿರುತ್ತದೆ. ಇದರ ಜೊತೆಗೆ ಪ್ರತ್ಯೇಕವಾದ ಜಿಲ್ಲಾ ಹಂತ ಮತ್ತು ತಾಲ್ಲೂಕು ಹಂತದಲ್ಲಿ ಪ್ರವಾಸವನ್ನು ಏರ್ಪಡಿಸುವುದರಿಂದ ಕಿರಿಯ ವಯಸ್ಸಿನ ಮಕ್ಕಳು ಸ್ಥಳೀಯ ಜ್ಞಾನವನ್ನು ಹೊಂದಲು ಅನುಕೂಲ ಕಲ್ಪಿಸಿಕೊಟ್ಟಂತಾಗುತ್ತದೆ ಎಂಬ ಅಭಿಪ್ರಾಯವನ್ನು ಸಭೆಯು ಅನುಮೋದಿಸಿತು.

**ತೀರ್ಮಾನ :**

- **ಅವಿಷ್ಕೃತ ಚಟುವಟಿಕೆಗಳಿಗೆ ರಾಜ್ಯಕ್ಕೆ 2 ಕೋಟಿ ಒದಗಿಸಬೇಕೆಂದು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವುದು**
- **ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮವನ್ನು ಮುಂದಿನ ವರ್ಷದಿಂದ ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟಗಳಲ್ಲಿ 2 ಹಂತದಲ್ಲಿ ಪ್ರತ್ಯೇಕವಾಗಿ ಆಯೋಜಿಸುವುದು**
- **ಕಾರ್ಯಕ್ರಮ ಅನುಷ್ಠಾನಕ್ಕೆ ಹಾಗೂ ಎಲ್ಲಾ ವರ್ಗದ ಮಕ್ಕಳನ್ನು ಯೋಜನೆಯಡಿ ಆಯ್ಕೆ ಮಾಡುವ ಸಲುವಾಗಿ ರಾಜ್ಯ ಸರ್ಕಾರದಿಂದ ವಾರ್ಷಿಕ ಕನಿಷ್ಠ 2 ಕೋಟಿ ರೂ ಅನುದಾನವನ್ನು ರಾಜ್ಯ ಕಛೇರಿಗೆ ಬಿಡುಗಡೆ ಮಾಡಲು ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು..**

**(ಕ್ರಮ : ಎಸ್ಎಸ್ಎ )**

| | |
|---|---|
| **ಅಜೆಂಡಾ –01** | **ದಿನಾಂಕ : 06.03.2007 ರಂದು ನಡೆದ ಆಡಳಿತ ಮಂಡಳಿ ಸಭೆಯ ನಡವಳಿಯ ದೃಢೀಕರಣ** |

ದಿನಾಂಕ : 06.03.2007 ರಂದು ಜರುಗಿದ ಸರ್ವ ಶಿಕ್ಷಣ ಅಭಿಯಾನದ 3 ನೇ ಆಡಳಿತ ಮಂಡಳಿ ಸಭೆಯ ನಡಾವಳಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

| | |
|---|---|
| **ಅಜೆಂಡಾ –02** | **ದಿನಾಂಕ 06–03–2007 ರಂದು ನಡೆದ ಆಡಳಿತ ಮಂಡಳಿ ಸಭೆಯ ನಡವಳಿಯನ್ವಯ ತೆಗೆದುಕೊಂಡ ಕ್ರಮಗಳ ಅನುಮೋದನೆ** |

| | |
|---|---|
| ಹಿಂದಿನ ಸಭೆಯ ಅಜೆಂಡಾ 2 ಕ್ರ. ಸಂ. 3 | ಕೈಗೊಂಡಿರುವ ಕ್ರಮದ ಬಗ್ಗೆ ವಿವರವನ್ನು ಸಭೆಯು ಓದಿ ದಾಖಲಿಸಿತು |
| ಹಿಂದಿನ ಸಭೆಯ ಅಜೆಂಡಾ 2 ಕ್ರ. ಸಂ. 4 | ಕೈಗೊಂಡಿರುವ ಕ್ರಮದ ಬಗ್ಗೆ ವಿವರವನ್ನು ಸಭೆಯು ಓದಿ ದಾಖಲಿಸಿತು |
| ಹಿಂದಿನ ಸಭೆಯ ಅಜೆಂಡಾ 2 ಕ್ರ. ಸಂ. 5 | ಕೈಗೊಂಡಿರುವ ಕ್ರಮದ ಬಗ್ಗೆ ವಿವರವನ್ನು ಸಭೆಯು ಓದಿ ದಾಖಲಿಸಿತು |
| ಹಿಂದಿನ ಸಭೆಯ ಅಜೆಂಡಾ 2 ಕ್ರ. ಸಂ. 6 | SIEMAT ಸ್ಥಾಪಿಸುವ ಬಗ್ಗೆ ಶೀಘ್ರದಲ್ಲಿಯೇ ರಾಜ್ಯ ಸರ್ಕಾರದಿಂದ ತೀರ್ಮಾನವನ್ನು ತೆಗೆದುಕೊಳ್ಳುವುದಾಗಿ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಆಶ್ವಾಸನೆ ನೀಡಿದರು. |
| ಹಿಂದಿನ ಸಭೆಯ ಅಜೆಂಡಾ 3 | ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ 2008–09 ನೇ ಸಾಲಿನಲ್ಲಿ ಮಂಜೂರಾಗಿರುವ 1165 ಪ್ರಾಥಮಿಕ ಶಾಲಾ ಶಿಕ್ಷಕರ ಹಾಗೂ 101 ತರಬೇತಿ ಹೊಂದಿದ ಪದವೀಧರ ಶಿಕ್ಷಕರ ಹುದ್ದೆಗಳ ಭರ್ತಿ ಬಗ್ಗೆ ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಯ ಅನುಮತಿ ಪಡೆದು ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲು ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಸೂಚಿಸಿದರು.<br>ಇತರೆ ವಿಷಯಗಳಲ್ಲಿ ಕೈಗೊಂಡ ಕ್ರಮದ ಬಗ್ಗೆ ವಿವರವನ್ನು ಸಭೆಯು ಓದಿ ದಾಖಲಿಸಿತು. |

- MHRD ಯನ್ನು ಪ್ರತಿನಿಧಿಸಿದ ಮಾನ್ಯ ಸದಸ್ಯರು ಅಲ್ಪಸಂಖ್ಯಾತ ಕೋಶವನ್ನು ಎಸ್‌ಎಸ್‌ಎ ರಾಜ್ಯ ಕಛೇರಿಯಲ್ಲಿ ಸೃಷ್ಟಿಸುವ ಅಗತ್ಯ ಇರುವುದಿಲ್ಲ. ಅದಕ್ಕೆ ಬದಲಾಗಿ Alternative Schooling Co-ordinator ಅವರೇ ಈ ಕೆಲಸವನ್ನು ಮಾಡಬಹುದು ಎಂಬ ಸಲಹೆಯನ್ನು ನೀಡಿದರು. ರಾಜ್ಯ ಯೋಜನಾ ನಿರ್ದೇಶಕರು ತಮ್ಮ ಹಂತದಲ್ಲಿ ಪರಿಶೀಲಿಸಿ ಯುಕ್ತವಾದ ಕ್ರಮವನ್ನು ತೆಗೆದುಕೊಳ್ಳಲು ಸಭೆಯು ಸೂಚಿಸಿತು.

| | |
|---|---|
| **ಅಜೆಂಡಾ –03** | **2001–02 ರಿಂದ 2007–08 ನೇ ಸಾಲಿನವರೆಗಿನ ಸರ್ವ ಶಿಕ್ಷಣ ಅಭಿಯಾನದ ಪ್ರಗತಿಯ** |

| | ಪಕ್ಷಿ ನೋಟ |
|---|---|

ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ಹಾಗೂ ಈವರೆಗೆ ಒದಗಿಸಲಾದ ಮೂಲಭೂತ ಸೌಲಭ್ಯಗಳು ಹಾಗೂ ಗುಣಾತ್ಮಕ ಶಿಕ್ಷಣದ ಬಗ್ಗೆ ಸಭೆಯು ವ್ಯಾಪಕವಾಗಿ ಚರ್ಚಿಸಿದ ನಂತರ ತೃಪ್ತಿ ವ್ಯಕ್ತಪಡಿಸಿತು.

| ಅಜೆಂಡಾ –04 | 2008–09 ನೇ ಸಾಲಿನಲ್ಲಿ ನವೆಂಬರ್ 2008 ರವರೆಗಿನ ಸರ್ವ ಶಿಕ್ಷಣ ಅಭಿಯಾನದ ಪ್ರಗತಿ ಪರಿಶೀಲನೆ |
|---|---|

, 2008–09 ನೇ ಸಾಲಿನ ಸರ್ವ ಶಿಕ್ಷಣ ಅಭಿಯಾನದ ಚಟುವಟಿಕೆವಾರು ಪ್ರಗತಿ ಪರಿಶೀಲನೆಯು ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು; ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು; ಕೇಂದ್ರ ಸರ್ಕಾರದ ಪ್ರತಿನಿಧಿ; ಡಾ: ಸುದರ್ಶನ್; ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ಹಾಗೂ ಕಾರ್ಯಪಾಲಕ ಅಭಿಯಂತರರು, ಸರ್ವ ಶಿಕ್ಷಣ ಅಭಿಯಾನ ರವರುಗಳು ಭಾಗವಹಿಸಿ ಚಟುವಟಿಕೆವಾರು ಕೂಲಂಕುಷ ಚರ್ಚೆ ನಡೆಸಿದರು. **ಕೇಂದ್ರ ಸರ್ಕಾರವು ರಾಜ್ಯದ ಉತ್ತಮ ಸಾಧನೆಯನ್ನು ಗಮನಿಸಿದ್ದು, 2008–09 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಪಾಲಿನ 3 ನೇ ಕಂತು ಅನುದಾನ ಬಿಡುಗಡೆ ಮಾಡಲು ತೀರ್ಮಾನಿಸಿರುವುದಾಗಿ ಕೇಂದ್ರ ಸರ್ಕಾರದ ಪ್ರತಿನಿಧಿ ಸಭೆಗೆ ತಿಳಿಸಿದರು.**

ಡಾ: ಸುದರ್ಶನ್ ಅವರು ಪೋಷಕರನ್ನು ಪ್ರತಿನಿಧಿಸುವ ಎಸ್.ಡಿ.ಎಮ್.ಸಿ, ಸ್ಥಳೀಯ ಸಂಸ್ಥೆಗಳು ಮತ್ತು ದಾನಿಗಳು ಸೇರಿ ಸಿವಿಲ್ ಕಾಮಗಾರಿಗಳ ನಿರ್ಮಾಣವನ್ನು ಚೆನ್ನಾಗಿ ಮಾಡುತ್ತಿದ್ದಾರೆ, ಇದು ಒಂದು ಒಳ್ಳೆಯ ಫಲಿತಾಂಶ ಎಂದು ಅಭಿಪ್ರಾಯ ಪಟ್ಟರು. ಎಲ್ಲಾ ಸದಸ್ಯರು ಈ ಅಭಿಪ್ರಾಯಕ್ಕೆ ಸಹಮತವನ್ನು ವ್ಯಕ್ತಪಡಿಸಿದರು.

ನೀರು ಮತ್ತು ವಿದ್ಯುತ್ ಅಳವಡಿಕೆಗೆ ಸಂಬಂಧಿಸಿದಂತೆ ಇಡಬೇಕಾದ ಠೇವಣಿಯಿಂದ ಶಾಲೆಗಳನ್ನು ಮುಕ್ತಗೊಳಿಸಲು ಕ್ರಮ ಕೈಗೊಳ್ಳುವಂತೆ ಸಭೆ ಸೂಚಿಸಿತು. ಶಾಲೆಗಳು ಸೇವಾ ವ್ಯಾಪ್ತಿಯಲ್ಲಿ ಬರುವುದರಿಂದ ಇದಕ್ಕೆ ರಿಯಾಯಿತಿ ಪಡೆಯಲು ಪತ್ರವನ್ನು ಬರೆಯಬೇಕು ಎಂದು ಮಾನ್ಯ ಶಿಕ್ಷಣ ಸಚಿವರು ಸೂಚಿಸಿದರು. ಇದನ್ನು ಸಭೆಯು ಅನುಮೋದಿಸಿತು.

**ತೀರ್ಮಾನ:**

- **ಸಿವಿಲ್ ಕಾಮಗಾರಿಗಳ ಬಗ್ಗೆ ಅಧ್ಯ ಗಮನ ವಹಿಸಿ ಅಪೂರ್ಣ ಕಟ್ಟಡಗಳನ್ನು ಈ ಸಾಲಿನ ಅಂತ್ಯದ ಒಳಗಾಗಿ ಪೂರ್ಣಗೊಳಿಸಲು ಕ್ರಮ ವಹಿಸುವುದು.**
- **ಸಿವಿಲ್ ಕಾಮಗಾರಿಗಳ ಗುಣಮಟ್ಟ ಕಾಪಾಡಲು ಅಗತ್ಯ ಕ್ರಮ ಜರುಗಿಸುವುದು**
- **ಯೋಜನೆಯ ಅನುಷ್ಠಾನ ಕಾರ್ಯಕ್ಕೆ ಸಕಾಲದಲ್ಲಿ ಹಣ ಬಿಡುಗಡೆ ಮಾಡುವುದು.**
- **ಕೇಂದ್ರ ಸರ್ಕಾರದಿಂದ 3 ನೇ ಕಂತಿನ ಹಣವನ್ನು ಆದಷ್ಟು ಜಾಗ್ರತೆ ಪಡೆದು ಯೋಜನಾ ಚಟುವಟಿಕೆಗಳಿಗೆ ಬಿಡುಗಡೆಗೊಳಿಸಿ, ಅನುಷ್ಟಾನ ಕಾರ್ಯ ಚುರುಕುಗೊಳಿಸುವುದು**

- ಜಿಲ್ಲಾ ಉಸ್ತುವಾರಿ ಸಮಿತಿ, ತಾಲ್ಲೂಕು ಉಸ್ತುವಾರಿ ಸಮಿತಿಗಳು ಕ್ರಿಯಾತ್ಮಕವಾಗಿ ಕೆಲಸ ಮಾಡುವಂತೆ ಕ್ರಮ ಆಗಬೇಕು. ಹಾಗೆ ಆದಾಗ ಮಾತ್ರ ಒಳ್ಳೆಯ ಫಲಿತಾಂಶವನ್ನು ಈ ಕ್ಷೇತ್ರದಲ್ಲಿ ನಿರೀಕ್ಷಿಸಲು ಸಾಧ್ಯ ಇದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು.
- ಜಿಲ್ಲಾ ಉಸ್ತುವಾರಿ ಸಮಿತಿ ಮತ್ತು ತಾಲ್ಲೂಕು ಉಸ್ತುವಾರಿ ಸಮಿತಿಗಳು ಅನುಮೋದನೆಯನ್ನು ನಿಗದಿತ ಅವಧಿಯೊಳಗೆ ನೀಡಲು ಕೋರುವುದು. ಕಾಲ ಕಾಲಕ್ಕೆ ಅನುಮೋದನೆ ದೊರಕದಿದ್ದಲ್ಲಿ, ಅನುಮೋದನೆಗೊಂಡಿದೆ ಎಂಬುದಾಗಿ ಭಾವಿಸಿ ಸಕಾಲಕ್ಕೆ ಸಿವಿಲ್ ಕಾಮಗಾರಿಗಳನ್ನು ಪ್ರಾರಂಭಿಸಲು ಸೂಚಿಸಲಾಯಿತು.
- ನೀರು ಮತ್ತು ವಿದ್ಯುತ್ ಅಳವಡಿಕೆಗೆ ಸಂಬಂಧಿಸಿದಂತೆ ಇಡಬೇಕಾದ ಠೇವಣಿಯಿಂದ ವಿನಾಯಿತಿ ನೀಡಲು ಸಂಬಂಧಿಸಿದ ಇಲಾಖೆಗಳಿಗೆ ಸಂಪರ್ಕಿಸಲು ಸೂಚಿಸಲಾಯಿತು.

(ಕ್ರಮ : ಸರ್ವ ಶಿಕ್ಷಣ ಅಭಿಯಾನ, ರಾಜ್ಯ ಕಛೇರಿ)

| ಅಜೆಂಡಾ –05 | 2006–07 ನೇ ಸಾಲಿನ ವಾರ್ಷಿಕ ವರದಿ ಹಾಗೂ ಆಡಿಟ್ ಮತ್ತು ಲೆಕ್ಕ ಪತ್ರಗಳ ಅನುಮೋದನೆ |
|---|---|

ವಿಷಯ ಕುರಿತು ನಡೆದ ಚರ್ಚೆಯಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿ, ಡಾ: ಸುದರ್ಶನ್ ಹಾಗೂ ಡಾನ್ ಬಾಸ್ಕೋ ಪ್ರತಿನಿಧಿ, ಪ್ರಜಾಯತ್ನ ಪ್ರತಿನಿಧಿ ಹಾಗೂ ಸಭೆಯಲ್ಲಿ ಹಾಜರಿದ್ದ ಇನ್ನಿತರ ಸಂಘ ಸಂಸ್ಥೆಗಳ ಪ್ರತಿ ನಿಧಿಗಳು ಭಾಗವಹಿಸಿ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿದರು.

ತೀರ್ಮಾನ :

- ಆಡಿಟ್ ಆಕ್ಷೇಪಣೆಗಳಿಗೆ ಕೈಗೊಂಡ ಕ್ರಮವನ್ನೂ ಸಹ ವಾರ್ಷಿಕ ವರದಿಯಲ್ಲಿ ಅಳವಡಿಸಲು ಕೇಂದ್ರ ಸರ್ಕಾರದ ಪ್ರತಿನಿಧಿ ತಿಳಿಸಿದರು.
- 2007–08ರ ಆಡಿಟ್ ವರದಿಗಳನ್ನೂ ಸಹ ಈ ಸಂದರ್ಭದಲ್ಲಿ ನೀಡಿದ್ದರೆ ಚೆನ್ನಾಗಿತ್ತು ಎಂಬ ಅಭಿಪ್ರಾಯವನ್ನು ಕೆಲವು ಸದಸ್ಯರು ವ್ಯಕ್ತಪಡಿಸಿದರು.
- ಈಶಾನ್ಯ ವಲಯದ ಜಿಲ್ಲೆಗಳಲ್ಲಿ PTR ಹೆಚ್ಚಾಗಿರುವ ಅಂಶವನ್ನು ಆಯುಕ್ತರು ಸಾ.ಶಿ.ಇ ರವರು ಪ್ರಸ್ತಾಪಿಸಿದರು.
- ಆಡಿಟ್ ವರದಿಯಲ್ಲಿ ಎತ್ತಿ ತೋರಿಸಿರುವ ನ್ಯೂನತೆಗಳ ಹಾಗೂ ಇವುಗಳನ್ನು ಸರಿಪಡಿಸಲು ಕೈಗೊಂಡಿರುವ ಕ್ರಮದ ವಿವರಗಳನ್ನು ಇನ್ನು ಮುಂದೆ ಸಭೆಯ ಮುಂದೆ ಮಂಡಿಸುವುದು.
- ಸಭೆಯು ಸರ್ವಾನುಮತದಿಂದ 2006–07ನೇ ಸಾಲಿನ ವಾರ್ಷಿಕ ವರದಿ ಹಾಗೂ ಆಡಿಟ್ ಮತ್ತು ಲೆಕ್ಕ ಪತ್ರಗಳನ್ನು ಅನುಮೋದಿಸಿತು.

ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಇಲಾಖಾಧಿಕಾರಿಗಳು ಶ್ರಮಿಸಲು ಹಾಗೂ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಒದಗಿಸುವಲ್ಲಿ ಹೆಚ್ಚು ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸುವಂತೆ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಸೂಚಿಸಿದರು.

ವಂದನಾರ್ಪಣೆಯನ್ನು ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ರವರು ನೆರವೇರಿಸಿದರು.

ಸಹಿ/-

ಎಸ್.ಸೆಲ್ವಕುಮಾರ್
ಸದಸ್ಯ ಕಾರ್ಯದರ್ಶಿಗಳು,
ಸರ್ವ ಶಿಕ್ಷಣ ಅಭಿಯಾನದ ಅಡಳಿತ ಮಂಡಳಿ ಹಾಗೂ
ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಬಿಯಾನ, ಬೆಂಗಳೂರು

ಸಹಿ/-

(ಡಾ: ಬಿ.ಎಸ್.ಯಡಿಯೂರಪ್ಪ)
ಸನ್ಮಾನ್ಯ ಮುಖ್ಯಮಂತ್ರಿಯವರು,
ಕರ್ನಾಟಕ ಸರ್ಕಾರ ಹಾಗೂ
ಅಧ್ಯಕ್ಷರು,
ಆಡಳಿತ ಮಂಡಳಿ
ಸರ್ವ ಶಿಕ್ಷಣ ಅಭಿಯಾನ